ದಿನಾಂಕಃ **21/01/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲುಃ **2**ನೇ ಎದುರುದಾರರ ಪರವಾಗಿ ಶ್ರೀ ಆರ್ ಜಿ ಎಸ್ ವಕೀಲರಿಂದಃ

1. ನಾನು ಇಂಜಿನಿಯರಿಂಗ್ ಪದವಿ ವಿದ್ಯಾಭ್ಯಾಸ ಮಾಡಿರುತ್ತೇನೆ. 2022 ರಲ್ಲಿ ನನ್ನ ವಿದ್ಯಾಭ್ಯಾಸ ಮುಗಿದಿರುತ್ತದೆ. ಮೃತ ಪವನ ರವರು ದಿಃ 02-09-2017 ರಲ್ಲಿ I.T.I ತರಬೇತಿ ಮುಗಿದಿರುತ್ತದೆ. ನಿಪಿ-10 ಮೃತ ಪವನ ರವರ I.T.I ತರಬೇತಿ ಮುಗಿದಿರುವ ಸಂಬಂಧಿಸಿದ ದಾಖಲಾತಿ ಆಗಿರುತ್ತದೆ. ಮೃತ ಪವನ ರವರು I.T.I ತರಬೇತಿ ಮುಗಿನ ನಂತರ ತುಮಕೂರು ಜಿಲ್ಲ, ಕೊರಟಗೆರೆ ತಾಲೂಕು ಜಟ್ಟಿ ಅಗ್ರಹಾರದಲ್ಲಿರುವ M.N.G Crushers ನಲ್ಲಿ ಕೆಲಸ ಮಾಡುತಿದ್ದರು. ನಿಪಿ-11 ರ ವೇತನ ಧೃಡೀಕರಣ ಪತ್ರದಲ್ಲಿ ಮೃತ ಪವನ ಯಾವ ದಿನಾಂಕದಿಂದ ಕೆಲಸ ನಿರ್ವಹಿಸುತಿದ್ದರು ಎಂಬ ಬಗ್ಗೆ ನಮೂದು ಇರುವುದಿಲ್ಲ. ನಿಪಿ-11 ರ ದಾಖಲಾತಿಯಲ್ಲಿ ವೇತನದಲ್ಲಿ ಕಡಿತವಾಗುತಿದ್ದ ಮೊತ್ತಗಳ ಬಗ್ಗೆ ಹಾಗೂ ಇತರೆ ನಮೂದುಗಳು ಇರುವುದಿಲ್ಲ ಎಂದರೆ ಸರಿ. M.N.G Crushers ನಲ್ಲಿ ಹಲವಾರು ಜನ ಕೆಲಸ ಮಾಡುತಿದ್ದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. M.N.G Crushers ನಲ್ಲಿ ನೌಕರರ ಹಾಜರಾತಿ ಪುಸ್ತಕ ಇಟ್ಟುಕೊಳ್ಳಲಾಗಿತ್ತೋ ಇಲ್ಲವೋ ಗೊತ್ತಿಲ್ಲ. ನಿಪಿ-11 ರ ದಾಖಲಾತಿಯನ್ನು M.N.G Crushers ನಲ್ಲಿ ನಾನು ಹೋಗಿ ಪಡೆದು ತಂದು ಹಾಜರುಪಡಿಸಿದ್ದೇನೆ. ನಿಪಿ-11 ರ ದಾಖಲಾತಿ ನೀಡಿದವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಲು ಕೇಳಬೇಕು. ನಿಪಿ-11 ರ ದಾಖಲಾತಿಯನ್ನು M.N.G Crushers ರವರು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-15 ಮತ್ತು 16 ರ Axis bank ನ statement ಗಳಲ್ಲಿ ಯಾವ ರೀತಿಯ ವಹಿವಾಟು ನಡೆಸಲಾಗಿದೆ ಎಂದು ಹೇಳಲು ಆಗುವುದಿಲ್ಲ. ನಿಪಿ-14 ಮತ್ತು 15 ರ ಆದಾಯ ತೆರಿಗೆ returns ನಲ್ಲಿ ನಿಪಿ-16 ಮತ್ತು 17 ರ bank statement ನ ವ್ಯವಹಾರಗಳಿಗೆ ಸಂಬಂದಿಸಿದಂತೆ ನಮೂದು ಇಲ್ಲ ಎಂದರೆ ಸರಿ. ಆದಾಯ ತೆರಿಗೆ returns ನಲ್ಲಿ ಮೃತ ಪವನ ರವರಿಗೆ ಇದ್ದ ವೇತನದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಆದಾಯದ ಬಗ್ಗೆ ಮಾತ್ರ ನಮೂದಿಸಲಾಗಿದೆ ಎಂದರೆ ಸರಿ.

2. ನನ್ನ ಸಹೋದರ ಮೃತ ಪವನ ಮಣಿಕಂಠ ರವರ ಮಾಲಿಕತ್ವಕ್ಕೆ ಒಳಪಟ್ಟ ಕಾರಿನಲ್ಲಿ ಅಪಘಾತದ ದಿನದಂದು ಕಾರಿನಲ್ಲಿ ಹೋಗಿದ್ದರು. ಅಪಘಾತದ ನಂತರ ಬೆಳಗ್ಗೆ 08.30 ರಿಂದ 09.00 ಗಂಟೆಯ ಸಮಯಕ್ಕೆ ಮೃತ ಪವನ ರವರನ್ನು ಅಪಘಾತದ ಸ್ಥಳವಾದ ಕುಂದಗೋಳ ಪೊಲೀಸ ಠಾಣಾ ವ್ಯಾಪ್ತಿ ಬೆಳ್ಳಿಗಟ್ಟಿ ಗ್ರಾಮಕ್ಕೆ ಹೋಗಿದ್ದೆವು. ಮೊದಲು ಅಪಘಾತವು ಎರಡು ಕಾರುಗಳ ನಡುವೆ ಆಗಿರುತ್ತದೆ. ಅಪಘಾತಪಡಿಸಿದ ಮತ್ತೊಂದು ಕಾರಿನ ನಂ.ಕೆಎ-50-ಎಂಬಿ-4229. ನಮ್ಮ ಕಾರು ಹಾಗೂ ನಂ.ಕೆಎ-50-ಎಂಬಿ-4229 ಕಾರುಗಳ ನಡುವೆ ಮೊದಲಿಗೆ ಅಪಘಾತ ಆಗಿತ್ತು. ಅಪಘಾತಪಡಿಸಿದ ಎರಡೂ ಕಾರುಗಳು ಅಪಘಾತದ ಸ್ಥಳದಲ್ಲಿ ರಸ್ತೆಯ ಎಡಭಾಗದ ಪುಟಪಾತ್ ನಲ್ಲಿ ನಿಲ್ಲಿಸಲಾಗಿತ್ತು. ಅಪಘಾತಪಡಿಸಿದ ಕಾರಿನ ಮಾಲಿಕ ಹಾಗೂ ವಿಮಾ ಸಂಸ್ಥೆಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ನಂದಕುಮಾರ ಮತ್ತು ಕಿಶನ್ ರವರಿಗೆ ಮಾತ್ರ ಪೆಟ್ಟಾಗಿತ್ತು. ಆ ಅಪಘಾತಕ್ಕೆ ಸಂಬಂಧಿಸಿದಂತೆ ಕಾರ್ ನಂ.ಕೆಎ-50-ಎಂಬಿ-4229 ಚಾಲಕನ ವಿರುದ್ಧ ಪ್ರಕರಣ ದಾಖಲಾಗಿತ್ತು. ಅಪಘಾತ ನಡೆದ ಸ್ಥಳದಲ್ಲೇ ಪವನ ಇದ್ದರು. ಪವನ ರವರು ರಸ್ತೆಯ ಎಡಭಾಗದಲ್ಲಿ ನಿಂತಿದ್ದರು. ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿರುತ್ತದೆ. ಎರಡೂ ಕಾರುಗಳ ನಡುವೆ ಸಂಭವಿಸಿದ ಅಪಘಾತದಿಂದಾಗಿ ಪವನ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಲಾರಿಯ ಚಾಲಕನ ತಪ್ಪಿನಿಂದ ಅಪಘಾತ ಸಂಭವಿಸಿಲ್ಲ ಎಂದರೆ ಸರಿಯಲ್ಲ. Highway patrol department ರವರು ಪ್ರಕರಣ ದಾಖಲಿಸಿದ್ದರು.

3. ಅಪಘಾತದ ಬಗ್ಗೆ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿದ್ದರು. ನಾನು ವ್ಯವಸಾಯ ಮಾಡುತಿದ್ದೇನೆ. ಮೃತ ಪವನ ವಿವಾಹ ಆಗಿರಲಿಲ್ಲ. ನನ್ನ ತಂದೆ ಸಹ ವ್ಯವಸಾಯ ಮಾಡುತಿದ್ದರು ಆದರೆ ಈಗ ಅವರಿಗೆ ಕೆಲಸ ಮಾಡಲು ಆಗುವುದಿಲ್ಲ. ನಮಗೆ ಒಟ್ಟು 2 ಎಕರೆ ಜಮೀನು ಇದೆ. ಜಮೀನುಗಳು ನನ್ನ ತಾತನ ಹೆಸರಿನಲ್ಲಿ ಇವೆ. ನನ್ನ ತಂದೆಗೆ ಒಟ್ಟು ಇಬ್ಬರು ಅಣ್ಣ ತಮ್ಮಂದಿರು ಹಾಗೂ 3 ಜನ ಅಕ್ಕ ತಂಗಿಯವರು. ನನ್ನ ತಾತನ ಜಮೀನುಗಳು ವಿಭಾಗ ಆಗಿರುವುದಿಲ್ಲ. ಸದರಿ ಜಮೀನುಗಳು ಮಳೆ ಆಶ್ರಿತ ಜಮೀನುಗಳು ಎಂದರೆ ಸರಿ. ಮೃತ ಪವನ ರವರಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. 2ನೇ ಎದುರುದಾರರ ವಿಮಾ ಸಂಸ್ಥೆಗೆ ಒಳಪಟ್ಟಿರುವ ಲಾರಿಯಿಂದ ಯಾವುದೇ ಅಪಘಾತ ಸಂಭವಿಸಿಲ್ಲ ಎಂದರೆ ಸರಿಯಲ್ಲ. ತಿಥಿ

ಕಾರ್ಯ ಹಾಗೂ ಇತರೆ ಕಾರ್ಯಗಳಿಗೆ ರೂ.2 ಲಕ್ಷದಷ್ಟು ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಎರಡು ಕಾರುಗಳ ನಡುವೆ ಅಪಘಾತವಾಗಿದ್ದು ಲಾರಿಯ ತಪ್ಪಿನಿಂದ ಅಪಘಾತ ಆಗದೇ ಇರುವ ಕಾರಣ 2ನೇ ಎದುರುದಾರರು ನಮಗೆ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **1**ನೇ ಎದುರುದಾರರ ಪರವಾಗಿ ಶ್ರೀ ಕೆ ಎನ್ ಎಸ್ ವಕೀಲರಿಂದಃ

1. ಅಪಘಾತದ ವೇಳೆಗೆ ಲಾರಿ ಚಾಲನೆ ಮಾಡಲು ಪರವಾನಗೆ ಇತ್ತು ಹಾಗೂ ಲಾರಿಗೆ ವಿಮೆ ಇತ್ತು ಎಂದರೆ ಸರಿ. ಆದ್ದರಿಂದ 1ನೇ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು